ಸಾಕ್ಷಿದಾರರನ್ನು ಕರೆಸಿ ಪ್ರಮಾಣೀಕರಿಸಲಾಯಿತು. ದಿನಾಂಕ : 07.12.2023

**ಮುಂದುವರೆದ ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ ಎಫ್. ಎಂ. ಎಂ. ವಕೀಲರಿಂದಃ**

1) ನನ್ನ ತಾಯಿ ಪ್ರತಿವಾದಿಯರ ಮೇಲೆ ಅಸಲು ದಾವಾ ಸಂಖ್ಯೆ 149/2018 ಅಂತಾ ದಾಖಲಿಸಿದ್ದರು ಎಂದರೆ ಸರಿ. ನನ್ನ ತಾಯಿ 2 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ಹಕ್ಕು ಬಿಟ್ಟು ಕೊಟ್ಟ ಪತ್ರ ಕೊಟ್ಟಿದ್ದು, ಅದು ಬಾಂಧಾಯಿಸುವುದಿಲ್ಲ ಎಂದು ದಾವೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಈ ದಿನ ನಾನು ಮತ್ತು 2 ನೇ ಪ್ರತಿವಾದಿ ನ್ಯಾಯಾಲಯಕ್ಕೆ ಜೊತೆಯಾಗಿ ಬಂದಿರುತ್ತೇವೆ ಎಂದರೆ ಸರಿ. ನನ್ನ ತಾಯಿ ಪ್ರತಿವಾದಿಯರು ಮೋಸ ಮಾಡಿರುತ್ತಾರೆ ಅಂತಾ ದಾವೆ ಸಲ್ಲಿಸಿರುತ್ತಾರೆ. ನಮ್ಮ ತಾಯಿಯನ್ನು ಹೆದರಿಸಿ, ಮೋಸ ಮಾಡಿ ಸಹಿಯನ್ನು ಪ್ರತಿವಾದಿಯರು ಮಾಡಿಸಿಕೊಂಡಿರುತ್ತಾರೆ. ನಾನು ಒಂದು ದಾಖಲೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಶಾಂತಮ್ಮ ತಾನು ಜೀವಂತ ಇದ್ದಾಗ ಪ್ರತಿವಾದಿಯರ ಹೆಸರಿಗೆ ದಾವಾ ಆಸ್ತಿ ಖಾತಾ ಮಾಡಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಸದರಿ ವರದಿಗೆ ನಾವು ಖುಬೂಲಿ ಸಹಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಯರು ತಮ್ಮ ಹೆಸರಿಗೆ ಆದ ಮೇಲೆ 2 ನೇ ಪ್ರತಿವಾದಿ 1 ನೇ ಪ್ರತಿವಾದಿಗೆ ನೊಂದಾದ ಹಕ್ಕು ಪತ್ರದ ಮುಖಾಂತರ ಆಸ್ತಿಯನ್ನು ಬಿಟ್ಟು ಕೊಟ್ಟಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ ದಾವೆ ದಾಖಲು ಮಾಡಿದಾಗ ದಾಖಲೆಗಳನ್ನು ನೋಡಿರುತ್ತೇನೆ. ದಾವಾ ಆಸ್ತಿಯಲ್ಲಿ 2011 ರಿಂದ ವರದಿ ನೀಡುತ್ತಾ ಖಾತಾ ಬದಲಾವಣೆ ಆಗುತ್ತಾ ಬಂದಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ ನಮ್ಮ ತಂದೆಯ ಆಸ್ತಿ ಅಲ್ಲ ಎಂದರೆ ಸರಿ. ಆದರೆ ದಾವಾ ಆಸ್ತಿಯು ನಮ್ಮ ತಾಯಿಯ ಆಸ್ತಿ ಎಂದು ನುಡಿಯುತ್ತಾರೆ. ದಾವೆಯಲ್ಲಿ ನಮ್ಮ ತಾಯಿಯ ವಂಶಾವಳಿ ನಮೂದಿಸಿಲ್ಲ ಎಂದರೆ ಸರಿ. ನಮ್ಮ ತಾಯಿಯ ತಂದೆ ಹೆಸರು ನನಗೆ ಗೊತ್ತಿಲ್ಲ. ನಮ್ಮ ತಾಯಿಯ ತಾಯಿ ಹೆಸರು ನನಗೆ ಗೊತ್ತಿಲ್ಲ. ನಮ್ಮ ತಾಯಿಯ ತಂದೆ ಮತ್ತು ತಾಯಿ ಯಾವಾಗ ತೀರಿಕೊಂಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿ ನಮ್ಮ ತಾಯಿಯ ತಂದೆ ತೀರಿಕೊಂಡ ನಂತರ ತಾಯಿಯ ತಾಯಿ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. ನಮ್ಮ ತಾಯಿಯ ತಾಯಿ ಮರಣ ಹೊಂದಿದ ಮೇಲೆ ದಾವಾ ಆಸ್ತಿ ನಮ್ಮ ದೊಡ್ಡಮ್ಮನ ಹೆಸರಿಗೆ ಆಯಿತು. ನಮ್ಮ ದೊಡ್ಡಮ್ಮ ನಮ್ಮ ತಾಯಿಗೆ ದಾವಾ ಆಸ್ತಿಯನ್ನು ಹಕ್ಕು ಬಿಟ್ಟು ಕೊಟ್ಟಿರುತ್ತಾಳೆ. ನಮ್ಮ ತಾಯಿಗೆ ಕೇವಲ ಕಂದಾಯ ಇಲಾಖೆಯಲ್ಲಿ ವರದಿ ಕೊಟ್ಟಿದ್ದರ ಮೇರೆಗೆ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿಗಳು ಕಂದಾಯ ಇಲಾಖೆಯಲ್ಲಿ ಕೇವಲ ವರದಿ ಮೂಲಕ ಖಾತಾ ಬದಲಾವಣೆ ಆಗುತ್ತಾ ಬಂದಿರುತ್ತವೆ ಎಂದರೆ ಸರಿ.

2) ಪ್ರತಿವಾದಿಯರ ಹೆಸರಿಗೆ ಖಾತೆ ಬದಲಾವಣೆ ಆದ ಬಗ್ಗೆ ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಸಾಕ್ಷಿಯು ಮೌನವಾಗಿರುತ್ತಾರೆ. ನಾನು ಮತ್ತು ನಮ್ಮ ತಾಯಿ ನೊಂದಾದ ಹಕ್ಕು ಬಿಟ್ಟ ಪತ್ರವನ್ನು ಯಾವುದೇ ನ್ಯಾಯಾಲಯದಲ್ಲಿ ಕಾಲ ಮಿತಿಯಲ್ಲಿ ರದ್ದು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ತಾಯಿ ಪ್ರತಿವಾದಿಯರ ವಿರುದ್ಧ

ಜೀವನಾಂಶ ಕೋರಿ ಎ. ಸಿ. ಯವರ ಕಚೇರಿಯಲ್ಲಿ ಅರ್ಜಿ ಸಲ್ಲಿಸಿದ್ದರು ಎಂದರೆ ಸರಿ. ಸದರಿ ಅರ್ಜಿಯಲ್ಲಿ ನಮ್ಮ ತಾಯಿ ಮತ್ತು 2 ನೇ ಪ್ರತಿವಾದಿ ಹೇಳಿಕೆ ನೀಡಿರುತ್ತಾರೆ ಎಂದರೆ ಸರಿ. ಸದರಿ ಹೇಳಿಕೆಯಲ್ಲಿ ನನ್ನ ತಾಯಿ ದಾವಾ ಆಸ್ತಿಯನ್ನು 1 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿದ್ದು ಆತನ ಖಾತಾ ಕಬ್ಜೆಯಲ್ಲಿ ಇದ್ದು, ನಮಗೆ 10,000/- ರೂಪಾಯಿಗಳ ಜೀವನಾಂಶ ಕೊಡಬೇಕೆಂದು ಕೇಳಿರುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ನಂತರ ತಿಂಗಳಿಗೆ 3,000/- ರೂಪಾಯಿಗಳ ಆದೇಶ ಆಗಿರುತ್ತದೆ ಎಂದರೆ ಸರಿ. ನಂತರ 1 ನೇ ಪ್ರತಿವಾದಿಯು ನನ್ನ ತಾಯಿ ಜೀವಂತ ಇರುವವರಗೊ ಜೀವನಾಂಶ ಕೊಡುತ್ತಾ ಬಂದಿರುತ್ತಾನೆ ಎಂದರೆ ಸಾಕ್ಷಿಯು 2 ತಿಂಗಳು ಕೊಟ್ಟಿರುತ್ತಾನೆ ಎಂದು ಸಾಕ್ಷ್ಯನುಡಿಯುತ್ತಾರೆ.

3) 1 ನೇ ಪ್ರತಿವಾದಿ ದಾವಾ ಆಸ್ತಿಯ ಮೇಲೆ ಕೆ. ವಿ. ಜಿ. ಬ್ಯಾಂಕಿನಲ್ಲಿ ಸಾಲ ಪಡೆದು ತುಂಬುತ್ತಾ ಬಂದಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯಲ್ಲಿ ಕೊಳವೆ ಬಾವಿ ಇದೆ ಎಂದರೆ ಸರಿ. 1 ನೇ ಪ್ರತಿವಾದಿ ತನ್ನ ಹೆಸರಿಗೆ ಖಾತಾ ಬದಲಾವಣೆ ಮಾಡಿಕೊಂಡು ಕೊಳವೆ ಬಾವಿ ತೆಗೆಸಿ ಪರವಾನಿಗೆ ಪಡೆದಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಸುಮಾರು 12 ವರ್ಷದಿಂದ ಕೊಳವೆ ಬಾವಿ ಇದೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಈಗ ಒಳ್ಳೆಯ ಉತ್ಪನ್ನ ಬರುವುದರಿಂದ 1 ನೇ ಪ್ರತಿವಾದಿಯ ಮೇಲೆ ದ್ವೇಷ ಬಂದು ನಾನು ದುರಾಸೆಗೆ ಬಲಿಯಾಗಿ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

4) 2 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಕಡೆಯಿಂದ 1,00,000/- ರೂಪಾಯಿಗಳ ಹಣ ಪಡೆದುಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯು ಕುಮ್ಮಕ್ಕಿನಿಂದ 1 ನೇ ಪ್ರತಿವಾದಿಯ ವಿರುದ್ಧ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಾಯಿಯ ತಾಯಿಯ ಮನೆ ಇದೆ ಎಂದರೆ ಸರಿ. ಸದರಿ ಮನೆ ನಮ್ಮ ದೊಡ್ಡಮ್ಮನ ಹೆಸರಿಗೆ ಇರುವುದರಿಂದ ಸೇರಿಸಿರುವುದಿಲ್ಲ. ಈ ದಾವೆಯಲ್ಲಿ ನಮ್ಮ ದೊಡ್ಡಮ್ಮನನ್ನು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನಮ್ಮ ದೊಡ್ಡಮ್ಮನ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಾನು 1 ನೇ ಪ್ರತಿವಾದಿಯ ಆಸ್ತಿಯನ್ನು ಎತ್ತಿ ಹಾಕಲು ಸುಳ್ಳು ದಾವೆಯನ್ನು ಮಾಡಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/-

ದಿವಾಣಿ ನ್ಯಾಯಾಧೀಶರು,

ಬ್ಯಾಡಗಿ.